ಇದನ್ನು ಮತ್ತೆ ಪ್ರಾರಂಭಿಸಿ ಈ 3 ತಿಂಗಳಲ್ಲಿ ಎಲ್ಲಾದರೂ ನೊಂದಾಯಿಸಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

(ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ. ಮಾಮನಿ) ರವರು ಪೀಠವನ್ನು ಅಲಂಕರಿಸಿದರು)

ಗಮನ ಸೆಳೆಯುವ ಸೂಚನೆ.

ಹರ್ಡೇಕರ್ ಮಂಜಪ್ಪನವರ ಸಮಾಧಿಯನ್ನು ರಾಷ್ಟ್ರೀಯ ಸ್ಮಾರಕವೆಂದು ಘೋಷಿಸುವ ಬಗ್ಗೆ.

ಶ್ರೀ ಬಸವನಗೌಡ ರಾ. ಪಾಟೀಲ್ (ಬಿಜಾಪುರ):- ಮಾನ್ಯ ಅಧ್ಯಕ್ಷರೇ, ಮಹಾತ್ಮಾ ಗಾಂಧೀಜಿಯವರು ಈ ದೇಶಕ್ಕೆ ಸ್ವಾತಂತ್ರ್ಯವನ್ನು ತಂದು ಕೊಡುವಂತಹ ಕಾಲದಲ್ಲಿ ಶ್ರೀಮಾನ್ ಹರ್ಡೇಕರ್ ಮಂಜಪ್ಪನವರೂ ಕೂಡ ಇದ್ದರು. ತುಂಗಾ ನದಿಯ ದಡದಲ್ಲಿ ಆಶ್ರಮ ಸ್ಥಾಪನೆಯಾದ ನಂತರ ಯಾವುದೋ ಅಹಿತಕರ ಘಟನೆ ನಡೆದು ದೇಶದ ಸ್ವಾತಂತ್ರ್ಯದ ಚಳುವಳಿಯ ದಿನಗಳಲ್ಲಿ ಅವರು ಶ್ರದ್ಧೆವಹಿಸಿ ದೇಶಾದ್ಯಂತ ಪ್ರವಾಸ ಮಾಡುವಂತಹ ಕಾಲದಲ್ಲಿ ಆಲಮಟ್ಟಿಗೆ ಬಂದಾಗ ಅಲ್ಲಿನ ಪ್ರಶಸ್ತ ವಾತಾವರಣಕ್ಕೆ ಮನಸೋತು ಅಲ್ಲಿ ಆಶ್ರಮ ಕಟ್ಟಿದರು. ಅವರ ಸಮಾಧಿಯ ಸ್ಥಳಾಂತರ ಕಾರ್ಯಕ್ರಮ ಮೊನ್ನೆ ಮುಗಿದಿದೆ. ಅವರ ಸಮಾಧಿಯ ಸ್ಥಳವನ್ನು ರಾಷ್ಟ್ರೀಯ ಸ್ಮಾರಕ ಎಂದು ಘೋಷಿಸಬೇಕು ಅವರೇ ನಿರ್ಮಿಸಿದಂತಹ ವೀರಶೈವ ವಿದ್ಯಾವರ್ಧಕ ಸಂಘ ಸಂಸ್ಥೆಯ ಮುಖಾಂತರ ಒಂದು ರೆಸಿಡೆನ್ಸ್‌ಯಲ್ ಶಾಲೆ ತೆಗೆಯಬೇಕು ಎಂಬ ಬಗ್ಗೆ ಸರಕಾರದ ಗಮನ ಸೆಳೆಯುತ್ತೇನೆ.

+ ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್(ಕನ್ನಡ ಮತ್ತು ಸಂಸ್ಕೃತಿ ಸಚಿವರು):- ಹೇಳಿಕೆ ಈ ರೀತಿ ಇದೆ.

"ಕರ್ನಾಟಕ ಗಾಂಧಿ ಎಂದೇ ಹೆಸರಾದ ಸ್ವಾತಂತ್ರ್ಯ ಹೋರಾಟಗಾರರು, ಶಿಕ್ಷಣ ಪ್ರೇಮಿ ಶ್ರೀ ಹರ್ಡೇಕರ್ ಮಂಜಪ್ಪನವರು ವಿಜಾಪುರ ಜಿಲ್ಲೆಯ ಆಲಮಟ್ಟಿಯಲ್ಲಿ ತಮ್ಮ ಕರ್ಮ ಭೂಮಿಯಾಗಿಸಿಕೊಂಡು ವೀರಶೈವ ವಿದ್ಯಾವರ್ಧಕ ಶಿಕ್ಷಣ ಸಂಸ್ಥೆ ಸ್ಥಾಪಿಸಿ, ಬ್ರಹ್ಮಚಾರಿಯಾಗಿ ದೇಶ ಸೇವೆಯೇ ಈಶ ಸೇವೆಯೆಂದು ತಮ್ಮನ್ನು ದೇಶಕ್ಕೆ ಸಮರ್ಪಿಸಿಕೊಂಡ ಹರ್ಡೇಕರ್ ಮಂಜಪ್ಪನವರ ಸಮಾಧಿ ಆಲಮಟ್ಟಿ ಕೃಷ್ಣ ಮೇಲ್ದಂಡೆ ಯೋಜನೆಯ ಆಣೆಕಟ್ಟು ಎತ್ತರದಿಂದ ಮುಳುಗುವ ಸಮಾಧಿ ದಿನಾಂಕ 28-2-98 ರಂದು ಸ್ಥಳಾಂತರವಾಗಿದ್ದು, ಇಂತಹ ರಾಷ್ಟ್ರ ಪುರುಷನ ವಿಚಾರಗಳು ಮುಂದಿನ ಪೀಳಿಗೆಗೆ ಜಾಗೃತಿಗಾಗಿ ಅವರ ಜ್ಞಾನ ದೀವಿಗೆ ಹಾಗೂ ರಾಷ್ಟ್ರಭಕ್ತಿ ಅನುಕರಣೀಯವಾಗಿರಲು ಓಡಾಡಿದ ಪ್ರದೇಶ ರಾಷ್ಟ್ರೀಯ ಸ್ಮಾರಕ ಎಂದು ಘೋಷಿಸುವ ಕುರಿತು ಮುಖ್ಯ ಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ."

ದಿವಂಗತ ಹರ್ಡೇಕರ್ ಮಂಜಪ್ಪನವರು ಓಡಾಡಿದ ಪ್ರದೇಶವನ್ನು ರಾಷ್ಟ್ರೀಯ ಸ್ಮಾರಕವೆಂದು ಘೋಷಿಸುವ ಕುರಿತು ಸ್ಥಳ ಪರಿಶೀಲನೆ ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ಬಾಗಲಕೋಟೆ ಜಿಲ್ಲೆಯ ಜಿಲ್ಲಾಧಿಕಾರಿಯವರಿಗೆ ಹಾಗೂ ಮಹಾ ವ್ಯವಸ್ಥಾಪಕರು ಮತ್ತು ಪುನರ್ ವಸತಿ ಮತ್ತು

ಪುನರ್ ನಿರ್ಮಾಣ, ಕೃಷ್ಣ ಮೇಲ್ದಂಡೆ ಯೋಜನೆ, ನವನಗರ ಬಾಗಲಕೋಟೆ ಅವರಿಗೆ ಸೂಚನೆ ನೀಡಲಾಗಿದೆ.

ಅವರ ವರದಿಯನ್ನು ಕೂಡಲೆ ಪಡೆದು ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಈಗಾಗಲೇ ಉತ್ತರ ಕನ್ನಡ ಜಿಲ್ಲೆಯ ಬನವಾಸಿಯಲ್ಲಿ ದಿವಂಗತ ಹರ್ಡೇಕರ್ ಮಂಜಪ್ಪನವರ ಸ್ಮಾರಕವನ್ನು ಸ್ಥಾಪಿಸಬೇಕೆಂದು ಸರ್ಕಾರ ನಿರ್ಧರಿಸಿ ಬನವಾಸಿಯಲ್ಲಿ ಹರ್ಡೇಕರ್ ಮಂಜಪ್ಪನವರು ನೆಲೆಸಿದ ಮನೆಯಲ್ಲಿ ವಾಚನಾಲಯವನ್ನು ಸ್ಥಾಪಿಸಲು ಮತ್ತು ಅವರ ಬರಹಗಳನ್ನು ಪುನರ್‌ಮುದ್ರಿಸಿ ಪ್ರಕಟಿಸಲು ಹಾಗೂ ತತ್ಸಂಬಂಧವಾಗಿ ವಿಚಾರ ಸಂಕೀರ್ಣಗಳನ್ನು ನಡೆಸಲು ಮತ್ತು ಸ್ಮಾರಕವನ್ನು ಸ್ಥಾಪಿಸುವ ಸಲುವಾಗಿ ರೂ. 2.00 ಲಕ್ಷ ರೂಗಳನ್ನು ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಮಂಜೂರು ಮಾಡಲಾಗಿದೆ. ಅವರು ವಾಸಿಸಿದ ಮನೆಯನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡು ಸ್ಮಾರಕವನ್ನು ಸ್ಥಾಪಿಸಲು ಜಿಲ್ಲಾಧಿಕಾರಿಯವರು ಕ್ರಮ ತೆಗೆದುಕೊಂಡಿರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ಸೇಡಂ ತಾಲ್ಲೂಕಿನಲ್ಲಿ ನಡೆದಂತಹ ಘಟನೆ ಬಗ್ಗೆ ಪ್ರಸ್ತಾಪ ಮಾಡಿದ್ದೆ. ರಾಮಣ್ಣ ಎನ್ನುವವರು ಪೊಲೀಸ್ ಕಸ್ಟಡಿಯಲ್ಲಿ ಪೊಲೀಸರ ಹೊಡೆತದಿಂದ ಸತ್ತು ಹೋಗಿದ್ದರ ಬಗ್ಗೆ ನಿನ್ನೆ ಸಂಜೆ ಇಲ್ಲವೇ ಇಂದು ಮುಂಜಾನೆ ಹೇಳಿಕೆ ಕೊಡುತ್ತೇನೆಂದು ಹೇಳಿದ್ದರು; ಹೇಳಿಕೆ ಕೊಡಬೇಕು.

5. ಸಚಿವರಿಂದ ಹೇಳಿಕೆ

ಸೇಡಂ ತಾಲ್ಲೂಕಿನ ಪೊಲೀಸ್ ಠಾಣೆಯಲ್ಲಿ ರಾಮಣ್ಣನವರ ಸಾವು.

+ ಶ್ರೀ ಆರ್. ರೋಷನ್ ಬೇಗ್ (ಗೃಹ ಸಚಿವರು):- ಅಧ್ಯಕ್ಷರೇ, Deceased Sri Ramanna was beaten up and he fell un-conscious on the ground ಎಂದು ಎಕ್ಸ್ ದಳಪತಿ ಅವರು ಪೊಲೀಸರಿಗೆ ದೂರು ಕೊಟ್ಟರು, ಆಗ ಪೊಲೀಸರು ಸ್ಥಳಕ್ಕೆ ಹೋಗುತ್ತಾರೆ. ಸಬ್ ಇನ್ಸ್‌ಪೆಕ್ಟರ್ ಅವರು ಸ್ಟೇಷನ್‌ಗೆ ಹೋದಾಗ ರಾಮಣ್ಣ ಅವರು ಕೆಳಗೆ ಬಿದ್ದಿರುತ್ತಾರೆ. ಆಗ ಎಸ್.ಐ. ಅವರು ರಾಮಣ್ಣ ಅವರ ಹೆಂಡತಿ ಮತ್ತು ಅವರ ಇನ್ನೊಬ್ಬ ಸಂಬಂಧಿಕರನ್ನು ಮತ್ತು ರಾಮಣ್ಣನನ್ನು ಕರೆದುಕೊಂಡು ಜೀಪಿನಲ್ಲಿ ಆಸ್ಪತ್ರೆಗೆ ಹೋಗುತ್ತಾರೆ. ಸೇಡಂ ಪೊಲೀಸ್ ಸ್ಟೇಷನ್‌ನಲ್ಲಿ ಕ್ರೈಮ್ ನಂಬರ್ 7/198 ಸೆಕ್ಷನ್ 302, 34 ಐ.ಪಿ.ಸಿ. ಕೆಳಗಡೆ ಒಂದು ಕೇಸ್ ರಿಜಿಸ್ಟರ್ ಆಗುತ್ತದೆ. ರಾಮಣ್ಣ ಅವರ ಚಿಕ್ಕ ತಮ್ಮ ದೇವಪ್ಪ ಅವರು ದೂರು ಕೊಟ್ಟಿದ್ದಾರೆ. ಚಂದ್ರ ಷಾ, ಶಂಕರಪ್ಪ ಇವರಿಬ್ಬರೂ ರಾಮಣ್ಣ ನವರನ್ನು ಹೊಡೆದು ಅದರ ನಂತರ ರಾಮಣ್ಣ ಅವರು ಕೆಳಗೆ ಬಿದ್ದರು ಎಂದು ಇವರು ಹೋಗಿ ದೂರು ಕೊಟ್ಟಿದ್ದಾರೆ. ಆಸ್ಪತ್ರೆಯಲ್ಲಿ ರಾಮಣ್ಣ ಅವರನ್ನು ಕರೆದುಕೊಂಡು ಹೋದಾಗ ಇವರು ಸತ್ತಿದ್ದಾರೆಂದು ಘೋಷಣೆ ಮಾಡಿದ್ದಾರೆ. ಲೋಕಲ್ ದಲಿತ ಆರ್ಗನೈಸೇಷನ್‌ನವರು ಇಲ್ಲಿ, ರಾಮಣ್ಣ ಅವರನ್ನು ಎಸ್.ಐ. ಆದ ರಾಥೋಡ್ ಹೊಡೆದಿದ್ದು ಎಂದು ಆಪಾದನೆ ಮಾಡಿದ್ದಾರೆ. ಆ ಪೊಲೀಸ್ ಇನ್ಸ್‌ಪೆಕ್ಟರ್ ಆದ ರಾಥೋಡ್ ರವರು ಕೂಡ ದಲಿತ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಅಷ್ಟರಲ್ಲಿ ಗುಲ್ಬರ್ಗಾ